**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.569/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಮನು ಎ.ವಿ. | ಫ್ರಾಸಾ-3 |
| ತಂದೆಯ ಹೆಸರು | : ವಿಜಯ್ ಕುಮಾರ್ | ಚಾಸಾ-4 |
| ವಯಸ್ಸು | : 37 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಫಾರೆಸ್ಟ್ ಗಾರ್ಡ್ | ದಿನಾಂಕಃ29.12.2025 |
| ವಾಸಸ್ಥಳ | : ICT ಘಟಕ, ಮೂಡಿಗೆರೆ | |

**:ಮುಖ್ಯ ವಿಚಾರಣೆ: ಫ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.01.12.2017 ರಿಂದ ದಿ.14.03.2024 ರವರೆಗೂ ಆಲ್ದೂರು ಅರಣ್ಯ ವಲಯದ ತಳವಾರ ಬೀಟ್ ನ ಫಾರೆಸ್ಟ್ ಗಾರ್ಡ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.20.11.2022 ಬೆ.7.52 ರ ಸಮಯಕ್ಕೆ ಚಾಸಾ-1 ರವರು ದೂರವಾಣಿ ಮೂಲಕ ನನಗೆ ಕರೆ ಮಾಡಿ ನನ್ನ ಬೀಟ್ ವ್ಯಾಪ್ತಿಯ ಎಸ್ಟೇಟ್ ಕುಂದೂರಿನಲ್ಲಿ ಶೋಭ ಎನ್ನುವವರು ಆನೆ ತುಳಿತಕ್ಕೆ ಒಳಗಾಗಿ ಸಾವನ್ನಪ್ಪಿದ್ದಾರೆ ಎಂದು ಚಾಸಾ-10 ರವರು ತಿಳಿಸಿರುವುದಾಗಿ ನನಗೆ ಹೇಳಿದರು. ನಂತರ ಬೆ.8.15 ರ ಸಮಯಕ್ಕೆ ನಾನು ಮತ್ತು ಚಾಸಾ-1 ರವರು ಶೋಭ ರವರ ಮೃತ ದೇಹ ಇದ್ದ ಸ್ಥಳಕ್ಕೆ ಹೋಗಿ ಅಲ್ಲಿ ಇದ್ದ ಮೃತರ ಪತಿ ಚಾಸಾ-9 ರವರನ್ನು ವಿಚಾರಿಸಿದಾಗ ಅವರು ಮತ್ತು ಅವರ ಪತ್ನಿ ಶೋಭ ರವರು ರಘುಗೌಡರವರ ತೋಟದಲ್ಲಿ ಹುಲ್ಲು ಕೊಯ್ಯಲು ಹೋದಾಗ ಬೆ.7.45 ಕ್ಕೆ ಕಾಡಾನೆಯೊಂದು ಏಕಾಏಕಿ ಬಂದು ಸೊಂಡಲಿನಿಂದ ಶೋಭ ರವರನ್ನು ಎತ್ತಿ ಬಿಸಾಡಿ ಸಾಯಿಸಿರುವುದಾಗಿ ತಿಳಿಸಿದರು. ನಾವು ಮಹಜರ್ ಕ್ರಮ ಜರುಗಿಸಲು ಮುಂದಾದಾಗ ಆರೋಪಿತರು ಮತ್ತು ಗ್ರಾಮಸ್ಥರು ನಮ್ಮನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು ಕರ್ತವ್ಯಕ್ಕೆ ಅಡ್ಡಿಪಡಿಸಿದರು. ನಂತರ 10 ಮತ್ತು 15 ನೇ ಆರೋಪಿತರು ನಮ್ಮ ಮೇಲೆ ಚಪ್ಪಲಿ ಎಸೆದರು. ಆ ಸಮಯಕ್ಕೆ 8 ನೇ ಆರೋಪಿ ಚಾಸಾ-1 ರವರಿಗೆ ಕಲ್ಲನ್ನು ಎಸೆದು ನಮ್ಮನ್ನು ಓಡಿಸಿಕೊಂಡು ಬರುವಾಗ ಚಾಸಾ-11 ರವರು ರಸ್ತೆಯಲ್ಲಿ ಬರುತ್ತಿದ್ದನು ನೋಡಿ ನಂತರ ನಾವು ರವಿಗೌಡರವರ ತೋಟದಲ್ಲಿ ಅಡಗಿ ಕುಳಿತುಕೊಂಡೆವು.

ನಂತರ ಉದ್ರಿಕ್ತ ಜನರು ಸ್ಥಳದಲ್ಲಿಯೇ ಇದ್ದ ಕಳ್ಳಬೇಟೆ ಶಿಬಿರ ಕಟ್ಟಡದ ಬಳಿ ಹೋಗಿ ಕಿಟಕಿ ಬಾಗಿಲು, ಸೋಲಾರ್ ಲೈಟ್ ಗಳನ್ನು ಹೊಡೆದು ಹಾಕಿದರು. ಅವರನ್ನು ಸ್ಥಳದಲ್ಲಿ ಇದ್ದ ಪೋಲಿಸರು ತಡೆದರು ಸಹಾ ಅವರ ಮಾತನ್ನು ಲೆಕ್ಕಿಸಿರುವುದಿಲ್ಲ. ಪೋಲಿಸರು ಘಟನೆಯ ವೀಡಿಯೋ ಮಾಡಿಕೊಂಡಿದ್ದಾರೆ. ಸ್ಥಳದಲ್ಲಿ ಇದ್ದರೆ ನಮ್ಮ ಪ್ರಾಣಕ್ಕೆ ತೊಂದರೆ ಇದೆ ಎಂದು ನಾನು ವಲಯ ಕಚೇರಿಗೆ ಹೋಗಿರುತ್ತೇನೆ. ವಲಯ ಕಚೇರಿಯಲ್ಲಿ ಚಾಸಾ-1 ರವರು ಸಹಾ ನನಗೆ ಸಿಕ್ಕಿದ್ದು 8 ನೇ ಆರೋಪಿಯು ಅವರಿಗೆ ಕಲ್ಲಿನಿಂದ ಹೊಡೆದಿದ್ದ ಕಾರಣ ಅವರ ಬಲಭುಜಕ್ಕೆ ಪೆಟ್ಟಾಗಿದ್ದು ಈ ಸಂಬಂಧ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಹೋದರು. ಮರುದಿನ ನಮ್ಮ ಇಲಾಖಾ ಮೇಲಾಧಿಕಾರಿಗಳು ಘಟನೆಯ ಸಂಬಂಧ ಮೂಡಿಗೆರೆ ಪೋಲಿಸ್ ಠಾಣೆಗೆ ದೂರು ದಾಖಲಿಸಲು ಚಾಸಾ-1 ರವರಿಗೆ ತಿಳಿಸಿದರು.

ದಿ.22.11.2022 ರಂದು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಪೋಲಿಸರು ತೋರಿಸಿದ ವೀಡಿಯೋಗಳ ಆಧಾರದ ಮೇಲೆ ಆರೋಪಿತರ ಹೆಸರು ಮತ್ತು ವಿವರಗಳನ್ನು ಹೇಳಿದ್ದೇನೆ. ಘಟನೆಯಿಂದ ಇಲಾಖೆಗೆ ಸುಮಾರು ರೂ.1,00,000/- ದಷ್ಟು ನಷ್ಟವಾಗಿರುತ್ತದೆ. ಘಟನಾ ಸಮಯಕ್ಕೆ ಸ್ಥಳೀಯರಾದ ಚಾಸಾ-5 ಮತ್ತು 6 ರವರು ವಸ್ತುಗಳನ್ನು ಜಖಂ ಮಾಡಬೇಡಿ ಎಂದು ಬಿಡಿಸಲು ಹೋದಾಗ ಆರೋಪಿತರು ಅವರ ಮಾತನ್ನು ಕೇಳಿರುವುದಿಲ್ಲ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಎಂ.ಒ.1 ರಿಂದ 7 ರ ವಸ್ತುಗಳನ್ನು ನೋಡಿ ಆರೋಪಿತರು ಜಖಂ ಗೊಳಿಸಿದ ವಸ್ತುಗಳು ಇವೆ ಎಂದು ಹಾಗೂ ಎಂ.ಒ.8 ರಿಂದ 10 ವಸ್ತುಗಳನ್ನು ತಮ್ಮ ಮೇಲೆ ಎಸೆಸಿದ್ದಾಗಿ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2, 3, 5 ರಿಂದ 18, 20 ಮತ್ತು 21 ನೇ ಆರೋಪಿತರನ್ನು ನೋಡಿ ಮೇಲೆ ಹೇಳಿದಂತೆ ತಮಗೆ ಹಲ್ಲೆ ಮಾಡಿ ಅರಣ್ಯ ಕಚೇರಿಯ ವಸ್ತುಗಳನ್ನು ನಾಶಪಡಿಸಿದ ವ್ಯಕ್ತಿಗಳು ಇವರೇ ಎಂದು ಗುರುತಿಸುತ್ತಾರೆ. 1, 4 ಮತ್ತು 19 ನೇ ಆರೋಪಿತರು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸುತ್ತಾರೆ.

**<u>ಪಾಟೀ ಸವಾಲು: 1, 2, 4 ರಿಂದ 6, 8, 13, 14, 16, 17, 20 ಮತ್ತು 21 ನೇ ಆರೋಪಿತರ ಪರ ಶ್ರೀ ಎಂ.ವಿ.ಜೆ. ವಕೀಲರಿಂದ:</u>**

ಕಾಡು ಪ್ರಾಣಿ ದಾಳಿಯಿಂದ ಸಾವು ಸಂಭವಿಸಿದರೆ ಸಾಮಾನ್ಯವಾಗಿ ನಾವು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ಸೂಕ್ತ ಸಲಕರಣೆ ಮತ್ತು ಆಯುಧದೊಂದಿಗೆ ಸ್ಥಳಕ್ಕೆ ಹೋಗುತ್ತೇವೆ ಎಂದರೆ ಸರಿ. ನಮ್ಮ ಇಲಾಖಾ ಮೇಲಾಧಿಕಾರಿಗಳು ನನಗೆ ಮತ್ತು ಚಾಸಾ-1 ರವರಿಗೆ ಸ್ಥಳಕ್ಕೆ ಹೋಗಿ ಮಹಜರ್ ಕ್ರಮ ಜರುಗಿಸುವಂತೆ ನಿರ್ದೇಶನ ನೀಡಿದ್ದರು. ಚಾಸಾ-1 ರವರು ನನ್ನ ಮೇಲಾಧಿಕಾರಿಗಳಾಗಿದ್ದು ಅವರಿಗೆ ಯಾವ ಮೇಲಾಧಿಕಾರಿಗಳು ನಿರ್ದೇಶನ ಕೊಟ್ಟಿದ್ದರು ಎಂದು ನನಗೆ ಹೇಳಿಲ್ಲ. ನಾವು ಮಹಜರ್ ಕ್ರಮ ಜರುಗಿಸುವಾಗ ಪಂಚರನ್ನು ಕರೆದುಕೊಂಡು ಹೋಗುತ್ತೇವೆ ಎಂದರೆ ಸರಿ. ನಾವು ಸ್ಥಳಕ್ಕೆ ಹೋಗಿದ್ದಾಗ ಅಲ್ಲಿ 50-70 ಜನ ಇದ್ದರು. ಆ ಜನರ ಪೈಕಿ ಮಹಿಳೆಯರು ಸಹಾ ಇದ್ದರ ಎಂದು ನಾನು ಸರಿಯಾಗಿ ನೋಡಿಲ್ಲ. ಅಷ್ಟು ಜನರು ಹಲ್ಲೇ ಮಾಡಲು ಒಟ್ಟಿಗೆ ಮುಂದಾದರೆ ನಾವು ತಪ್ಪಿಸಿಕೊಳ್ಳುತ್ತೇವೆ ಎಂದರೆ ಸರಿ. ರಸ್ತೆಯ ಮೂಲಕ ರವಿಗೌಡರವರ ತೋಟಕ್ಕೆ ಇಳಿದು ಅಲ್ಲಿಂದ ಓಡಿಹೋಗಿದ್ದೆವು. ನಾವು ಯಾವ ಕಡೆ ಓಡಿಹೋಗುತ್ತಿದ್ದೆವು ಎಂದು ಅಲ್ಲಿ ಇದ್ದ ಜನರು ನೋಡಿದ್ದರ ಎಂದು ನಾನು ಗಮನಿಸಲಿಲ್ಲ. ನಾನು ಮತ್ತು ಚಾಸಾ-1 ರವರು ಸ್ಥಳಕ್ಕೆ ಹೋಗಿದ್ದರೆ ಅಲ್ಲಿದ್ದ ಜನರು ನಮ್ಮನ್ನು ತಪ್ಪಿಸಿಕೊಳ್ಳಲು ಬಿಡುತ್ತಿರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕಾಫೀ ತೋಟವಾದ ಕಾರಣ ಅಡಗಿ ಕುಳಿತಿದ್ದೆವು ಎಂದು ನುಡಿಯುತ್ತಾರೆ.

ನಾವು ಅಡಗಿ ಕುಳಿತಿದ್ದ ಸ್ಥಳವು ರಸ್ತೆಯಲ್ಲಿ ಇದ್ದ ಜನರಿಗೆ ಕಾಣುತ್ತಿರಲಿಲ್ಲ. ನಾವು ಅಡಗಿ ಕುಳಿತಿದ್ದ ಸ್ಥಳದಿಂದ ಶಿಬಿರದ ಕಟ್ಟಡವು ಸುಮಾರು 100 ಮೀಟರ್ ದೂರದಲ್ಲಿ ಇತ್ತು. ನಿಪಿ-3 ರಲ್ಲಿನ ನಕ್ಷೆಯಲ್ಲಿ ನಾವು ಅಡಗಿ ಕುಳಿತಿದ್ದ ಸ್ಥಳವನ್ನು ಗುರುತಿಸಿಲ್ಲ ಎಂದರೆ ಸರಿ. ವೀಡಿಯೋ ನ ಆಧಾರದ ಮೇಲೆ ನಾನು ಆರೋಪಿತರನ್ನು ಗುರುತಿಸಿದ್ದೆ ಎಂದು ಹೇಳಿರುವ ಸಂಬಂಧ ಪೋಲಿಸರು ಬರವಣಿಗೆ ಮಾಡಿ ನನ್ನ

ಸಹಿಯನ್ನು ಪಡೆದಿಲ್ಲ. ಈ ದಿನ ನಾನು ಯಾವುದೇ ವೀಡಿಯೋ ದೃಶ್ಯಾವಳಿಗಳನ್ನು ನೋಡಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಪೋಲಿಸರು ಘಟನೆಯ ವೀಡಿಯೋ ಮಾಡಿಲ್ಲ ಹಾಗೂ ನಾನು ಯಾವುದೇ ವೀಡಿಯೋ ನೋಡಿಲ್ಲ ಎಂದರೆ ಸರಿಯಲ್ಲ. ದಿ.22.11.2022 ರಂದು ವೀಡಿಯೋಗಳನ್ನು ನಾನು ನೋಡಿದ್ದೆ. ನಿಪಿ-2 ರಲ್ಲಿ ಕೆಲವು ಆರೋಪಿತರ ಹೆಸರನ್ನು ನಮೂದಿಸಲಾಗಿದೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರ ಹೆಸರನ್ನು ನಾನು ಹೇಳುತ್ತೇನೆ. ನಾನು ಹುಲ್ಲೇಮನೆ ಬೀಟ್ ನ ಗಸ್ತು ಕರ್ತವ್ಯ ಮಾಡುತ್ತಿದ್ದ ಕಾರಣ ಆರೋಪಿತರ ಹೆಸರು ನನಗೆ ತಿಳಿದಿದೆ ಎಂದರೆ ಸರಿ. ಆರೋಪಿತರನ್ನು ಗುರುತಿಸಲು ಠಾಣೆಗೆ ಬರುವಂತೆ ಪೋಲಿಸರು ನನಗೆ ಲಿಖಿತವಾಗಿ ನೋಟೀಸು ಕೊಟ್ಟಿರಲಿಲ್ಲ.

ದಿ.20.11.2022 ರಂದು ನಾನು ಮತ್ತು ಚಾಸಾ-1 ರವರು ಇಬ್ಬರೇ ಮೃತ ಶೋಭ ರವರ ಮೃತ ಸ್ಥಳದ ಮಹಜರ್ ಜರುಗಿಸಲು ಹೋಗಿದ್ದೆವು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಆರೋಪಿತರು ಇದ್ದರು ಹಾಗೂ ಅವರು ನಮ್ಮ ಮೇಲೆ ಎಂ.ಒ.8 ರಿಂದ 10 ರ ವಸ್ತುಗಳನ್ನು ಎಸೆದರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಪೋಲಿಸರು ನನ್ನ ಹೇಳಿಕೆ ದಾಖಲಿಸಿಕೊಳ್ಳುವಾಗ ನನ್ನ ಸಹಿ ಪಡೆದಿದ್ದಾರೆ. ನಾನು ಒಂದು ಪುಟದ ಹೇಳಿಕೆ ಹೇಳಿದ್ದೇನೆ. ಆರೋಪಿತರು ಶಿಬಿರ ಕಟ್ಟಡದ ಕಿಟಕಿ ಬಾಗಿಲು ಮತ್ತು ಇತರೆ ವಸ್ತುಗಳನ್ನು ಹೊಡೆದುಹಾಕಿದ್ದಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಎಂ.ಒ.1 ರಿಂದ 10 ರ ವಸ್ತುಗಳನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ನಾವೇ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲು: ಉಳಿದ ಆರೋಪಿತರ ಪರ ವಕೀಲರು 1, 2, 4 ರಿಂದ 6, 8, 13, 14, 16, 17, 20 ಮತ್ತು 21 ನೇ ಆರೋಪಿತರ ಪರ ಆದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.